ವರ್ತನೆ, ಚಹರೆ ಎಲ್ಲವೂ ವಿಚಿತ್ರವಾಗೇ ತೋರುತ್ತಿವೆ. ಒಳಮನಸ್ಸಿನ ನನ್ನ ಅನಿಸಿಕೆಯನ್ನು ಓದಬಲ್ಲ ಈ ಮನುಷ್ಯ ನೇರವಾಗಿ ಹೇಳದೇ, ತಲುಪಿಸುವುದನ್ನು ನಿಖರವಾಗಿ ತಲುಪಿಸುತ್ತಿದ್ದಾನೆ. ನಾವು ಕಂಪ್ಯೂಟರ್, ಮೊಬೈಲ್‌ಗಳಲ್ಲಿ ಬಳಸುವ ಆ್ಯಪ್‌ಗಳನ್ನು ಬಳಸಿಕೊಂಡಂತೆ ಅಲ್ಲ. ತನ್ನಿಂದಲೇ ನೇರ ಸಂವಹಿಸುತ್ತಿದ್ದಾನೆ. ಯಾರಿರಬಹುದು ಈತ?' ಎಂದು ನಿದ್ದೆ ಬಾರದೇ ಸಂತೋಷ ತನ್ನೊಳಗೇ ಚಿಂತಿಸುತ್ತಿದ್ದ.

ಅಷ್ಟರಲ್ಲೇ ನೆಲದೊಳಗೆ ಏನೋ ಸರಿದಂತೆ ಸದ್ದೊಂದು ಕೇಳಿಸಿ ಸಂತೋಷ ಗಾಬರಿಯಿಂದ ಮುಚ್ಚಿಕೊಂಡಿದ್ದ ಹೊದಿಕೆಯನ್ನು ತೆಗೆದು ನೋಡಿದಾಗ ಲಾಂದ್ರದ ಬುಡದಲ್ಲಿ ಮೂರ್ತಿರಾಯರು ಎದುರಿದ್ದ ಸಿಬ್ಬಲಿನಿಂದ ಎಲೆ ಅಡಿಕೆ ಹಾಕುವ ಸನ್ನಾಹದಲ್ಲಿರುವುದು ಮಸುಕಾಗಿ ಕಂಡಿತು, 'ನಿಮ್ಮ ಹೆಸರು ಸಂತೋಷ ಅಲ್ಲವೇ, ಯಾಕೆ ಒದ್ದಾಡ್ತೀರಿ, ನಿದ್ರೆಯೇ ಹಾಗೆ. ಕೆಲವೊಮ್ಮೆ ನಮ್ಮನ್ನ ಅಸಹಾಯಕರನ್ನಾಗಿ ಮಾಡುತ್ತದೆ. ನಾವು ಕೋರಿದಾಗ ಬರುವಂತೆ ಅದನನ್ನು ಪಳಗಿಸಬೇಕು' ಎಂದವರು ಸಿದ್ಧಪಡಿಸಿದ ಕವಳವನ್ನು ಬಾಯಿಗೆಸೆದು, 'ಮನುಷ್ಯ ವಿಸ್ಮೃತಿ ಇಲ್ಲಾ ಅಪಸ್ಮೃತಿಯಲ್ಲಿರಬೇಕು; ಅಂದರೆ ಪೂರ್ತಿ ಎಚ್ಚರ ಇಲ್ಲವೇ ಪೂರ್ತಿ ಸುಷುಪ್ತಿ. ಅರೆಬರೆ ಪ್ರಯೋಜನವಿಲ್ಲ, ಎದ್ದು ಬನ್ನಿ' ಎಂದು ಕರೆದರು. ಚಾದರವನ್ನು ಹೊದ್ದು ಬಂದ ಸಂತೋಷ ಎದುರಿನಲ್ಲಿ ಕೂತ.

'ಈಗೊಂದು ಸದ್ದು ಆಯ್ತಲ್ಲಾ, ನಿಮಗೆ ಕೇಳಿಸೀತಾ?' ಎಂದರು. 'ಹೌದು, ಕೇಳಿಸಿತು' ಎಂದ ಸಂತೋಷ.

'ಭಯಪಡಬೇಡಿ, ನೀವು ಸಾಕಷ್ಟು ಪ್ರಕೋಪ, ವಿಕೋಪಗಳನ್ನು ಕಂಡವರು. ಸಹಿಸುವ ಶಕ್ತಿ ನಿಮ್ಮಲ್ಲಿದೆ. ಪಾಪ, ಅಲ್ಲಿ ಮಲಗಿದೆಯಲ್ಲ, ಆ ಮಗುವಿಗಿಲ್ಲ. ಇದು ಆರಂಭ. ಊಹಿಸಲಾಗದ ಅನರ್ಥಗಳನ್ನು ನಾವು ಕಾಣಬೇಕಿದೆ' ಎಂದವರು ಮೌನಿಯಾದರು. ಅಷ್ಟರಲ್ಲೇ ಮತ್ತೊಮ್ಮೆ ನಭ ಸೀಳಿ ಹೋಗುವಂತೆ ಗುಡುಗುಡು ಸದ್ದೊಂದು ಆರ್ಭಟಿಸಿತು.

'ನಿಮ್ಮನ್ನ ಹೆಚ್ಚು ಸತಾಯಿಸೋದಿಲ್ಲ, ನಿಮ್ಮ ಮನಸ್ಸಿನ ಪ್ರಶ್ನೆಗಳಿಗೆ ಉತ್ತರ ಕೊಟ್ಟುಬಿಡುತ್ತೇನೆ. ಯಾಕೆಂದರೆ, ನಾಳೆ ಸಮಯ ಸಿಗೋದೇ ಇಲ್ಲ' ಎಂದವರು ಲಾಂದ್ರ ಹಿಡಿದು ಬಾಗಿಲು ತೆರೆದರು. ಬರ್ರನೇ ಗಾಳಿ ನುಗ್ಗಿ ಬಂತು. ಆ ಗಾಳಿಗೆದುರಾಗಿ ಹೊರಗೆ ಹೋಗಿ ಕವಳ ಉಗಿದು ಬಂದರು. ಲಾಂದ್ರಕ್ಕೆ ಸೀಮೆಎಣ್ಣೆ ಕಡಿಮೆಯಾಗುತ್ತ ಬಂದಿತ್ತೇನೋ, ಕ್ಷೀಣವಾಗುತ್ತಿತ್ತು.

'ನಾನು ಮೂರ್ತಿರಾಯ ಎಂದೆ ಅಲ್ಲವೆ ನಿಮ್ಮ ಬಳಿ. ಅಲ್ಲ, ನಿಜವಾಗಿ ನಾನು ಅವನಲ್ಲ. ನನ್ನ ನಿಜ ಹೆಸರು ಕೃಷ್ಣ ನಂಬೂದರಿ. ವಿಜ್ಞಾನದಲ್ಲಿ ಪದವಿ ಮುಗಿಸಿ ಏರೋನಾಟಿಕಲ್ ಎಂಜಿನಿಯರಿಂಗ್ ಅಧ್ಯಯನ ಮಾಡಿದೆ. ದೇಶದ ಅತ್ಯಂತ ಪ್ರಮುಖ ಸಂಸ್ಥೆಯಲ್ಲಿ ಕೆಲಸ ಮಾಡಿದೆ. ಕೇರಳದವನಾದರೂ ಕನ್ನಡ ಸೇರಿದಂತೆ ಐದಾರು ಭಾಷೆ ನನಗೆ ನಿರರ್ಗಳ. ಅವಿವಾಹಿತನಾಗೇ ಉಳಿದೆ. ವೃತ್ತಿಯ ನಡುವೆ ಒಂದಿಷ್ಟು ದಿನ ರಜಾ ಹಾಕಿ ದೇಶ ಸುತ್ತುವುದು ಹವ್ಯಾಸವಾಗಿತ್ತು. ಒಮ್ಮೆ ಈ ಪ್ರದೇಶಕ್ಕೆ ಬಂದೆ. ಒಂಟಿಯಾಗಿ ಕಾಡು ಹೊಕ್ಕವನು ನಿಮ್ಮಂತೆಯೇ ದಿಕ್ಕು ತಪ್ಪಿದೆ. ಸಂಜೆ ನಿಮಗೆ ಸಿಕ್ಕನಲ್ಲ, ಅವನ ಅಪ್ಪ ನನಗೆ ಆಗ ಒದಗಿಬಂದ. ಆವತ್ತು ಅವನ ಬಿಡಾರದಲ್ಲೇ ಉಳಿದೆ. ಅಂದಿನಿಂದ ವರ್ಷಕ್ಕೊಮ್ಮೆ ಇಲ್ಲಿಗೆ ಬಂದು ನಾಲ್ಕಾರು ದಿನ ಉಳಿದುಹೋಗುತ್ತಿದ್ದೆ. ವೃತ್ತಿಯ ಏಕತಾನತೆ, ಅಥವಾ ಅದಕ್ಕಿಂತ ಅದರ ನಿಷ್ಪ್ರಯೋಜಕತೆ ಬೇಸರವಾಯ್ತು. ಬಿಟ್ಟೆ. ನಾನು ಬಿಟ್ಟರೂ ಗ್ರಹಗತಿ ಬಿಡಬೇಕಲ್ಲ, ದೇಶದ ರಹಸ್ಯ ಯೋಜನೆಗಳನ್ನು ರೂಪಿಸುವ ಸಂಸ್ಥೆಯಿಂದ ಹೊರಬಂದರೂ ಸರಕಾರದ ಗೂಢ ಕಣ್ಣುಗಳು ನನ್ನ ಹಿಂದೆಯೇ ಇದ್ದವು. ನನಗೆ ಮೊದಲಿನಿಂದಲೂ ಅಲೌಕಿಕ, ಅತೀಂದ್ರಿಯ ಜ್ಞಾನಶಾಖೆಗಳ ಬಗ್ಗೆ ಆಕರ್ಷಣೆ. ಒಮ್ಮೆ ಹೃಷಿಕೇಶಕ್ಕೆ ಹೋದಾಗ ಓರ್ವ ಸಂತರು ವಿಜ್ಞಾನಕ್ಕೂ ಅಧ್ಯಾತ್ಮಕ್ಕೂ ಕೂದಲೆಳೆಯ